

# ಕಲೆ

## ಮುಚ್ಚುವ ಕಲೆ





ತ್ವಚೆಯ ಆರೈಕೆಯೆಂದರೆ ಬಿಸಿಲು– ನೆರಳಿನ ಆಟವಿದ್ದಂತೆ. ಯಾವಾಗ ಏನಾಗುತ್ತದೋ ಅರಿವಿಗೇ ಬಾರದು. ಮುಖದ ಮೇಲೆ ಮೂಡಿದ ಮೊಡವೆಯನ್ನು ಸಾಗಹಾಕಿ ಉಸ್ಸಪ್ಪ ಎಂದರೆ ನಾನಿದ್ದೇನೆ ಎಂದು ಪ್ರತ್ಯಕ್ಷವಾಗುತ್ತದೆ ಬಿಸಿಲಿನ ಝಳಕ್ಕೆ ಕಂದು ಬಣ್ಣಕ್ಕೆ ತಿರುಗಿದ ಚರ್ಮ. ಕೆಲವೊಂದು ಸುಲಭ ಉಪಾಯಗಳನ್ನು ಅನುಸರಿಸಿದರೆ ಈ ಎಲ್ಲ ಸಮಸ್ಯೆಗಳಿಗೆ ವಿದಾಯ ಹೇಳಿ ನಯವಾದ ತ್ವಚೆಯನ್ನು ನಿಮ್ಮದಾಗಿಸಿಕೊಳ್ಳಬಹುದು.

### ಕಲೆ

ಮುಖದ ಮೇಲೆ ಗಾಯವಾದರೆ ಅದು ವಾಸಿಯಾದ ನಂತರ ಕಲೆಯಾಗಿ ಮಾರ್ಪಡುತ್ತದೆ. ವಾಸಿಯಾಗಲು ಸುಮಾರು ಒಂದು ತಿಂಗಳು ಬೇಕು. ಈ ಕಲೆಯನ್ನು ಮರೆಮಾಚಲು ಮಾರುಕಟ್ಟೆಯಲ್ಲಿ ಕನ್ಸೀಲರ್ ಲಭ್ಯ. ಆದರೆ ಎರಡು ಬಗೆಯ ಕನ್ಸೀಲರ್ ಮಿಶ್ರ ಮಾಡಬೇಕು. ಒಂದು ನಿಮ್ಮ ತ್ವಚೆಗೆ ಹೊಂದುವಂಥ ಬಣ್ಣ, ಇನ್ನೊಂದು ಇದಕ್ಕಿಂತ ಗಾಢ ವರ್ಣದ್ದು. ಈ ಮಿಶ್ರಣವನ್ನು ಫೌಂಡೇಷನ್ ಬ್ರಶ್‌ನಿಂದ ಕಲೆಯ ಮೇಲೆ ಬಳಿಯಿರಿ. ಈ ಕಲೆ ಚರ್ಮಕ್ಕಿಂತ ಮೇಲಕ್ಕೆ ಎದ್ದಂತಿದ್ದರೆ ಮ್ಯಾಟ್ ಪೌಡರ್ ಅನ್ನು ಲೇಪಿಸಿ.

### ಎದ್ದು ಕಾಣುವ ರಕ್ತನಾಳ

ರಕ್ತನಾಳದಲ್ಲಿ ರಕ್ತದ ಪೂರೈಕೆ ಕಡಿಮೆಯಾದಾಗ ಅಥವಾ ಅನುವಂಶೀಯವಾಗಿ ಕೆಲವರಿಗೆ ಕೆಂಪು ಬಣ್ಣದ ಬಲೆಯಂಥ ಗೆರೆಗಳು ಕಾಣಿಸಿಕೊಳ್ಳುತ್ತವೆ. ಹೆಚ್ಚಾಗಿ ಕಾಲಿನ ಹಿಂಭಾಗ ಅಂದರೆ ಮೀನಖಂಡದಲ್ಲಿ ಇವು ಕಂಡುಬರುತ್ತವೆ. ಇವುಗಳನ್ನೂ ಮರೆಮಾಚಿ ನಯವಾದ ಒಂದೇ ಬಣ್ಣದ ತ್ವಚೆ ಇರುವಂತೆ ಮಾಡಬಹುದು. ರಕ್ತನಾಳದ ಮೇಲೆ ಟಿಂಟೆಡ್ ಮಾಯಿಶ್ಚರೈಸರ್ ಉಜ್ಜಿ. ಇದರ ಮೇಲೆ ಹೊಳೆಯುವ ಕಣಗಳುಳ್ಳ ಲೋಶನ್ ಸಿಗುತ್ತದೆ. ಅದನ್ನು ಲೇಪಿಸಿ. ಇದು ತಾತ್ಕಾಲಿಕ. ಶಾಶ್ವತ ಪರಿಹಾರ ಬೇಕಾದರೆ ಲೇಸರ್ ಚಿಕಿತ್ಸೆ ಪಡೆಯಬಹುದು. ಇದೂ ವಿಫಲವಾದರೆ ಈ ವೆರಿಕೋಸ್ ರಕ್ತನಾಳ ತೆಗೆದು ಹಾಕಲು ಶಸ್ತ್ರಚಿಕಿತ್ಸೆ ಬೇಕಾಗಬಹುದು.

### ಹುಟ್ಟುಮಚ್ಚೆ

ಹುಟ್ಟಿದ ಒಂದು ತಿಂಗಳೊಳಗೆ ರಕ್ತನಾಳಗಳ ಅಧಿಕ ಬೆಳವಣಿಗೆಯಿಂದ ತ್ವಚೆಯ ಮೇಲೆ ಹುಟ್ಟುಮಚ್ಚೆ ಕಾಣಿಸಿಕೊಳ್ಳುತ್ತದೆ. ಕಣ್ಣಿನ ಕೆಳಗೆ ಕಾಣಿಸಿಕೊಳ್ಳುವ ಕಪ್ಪು ವರ್ತುಲಗಳನ್ನು ಮರೆಮಾಚಲು ಲೇಪಿಸುವ 'ಅಂಡರ್ ಐ ಕನ್ಸೀಲರ್' ಅನ್ನು ಈ ಹುಟ್ಟುಮಚ್ಚೆಗೆ ಹಚ್ಚಬಹುದು. ಇದರಿಂದ ಮಚ್ಚೆ ತ್ವಚೆಯ ಬಣ್ಣಕ್ಕೆ ಹೊಂದಿಕೊಳ್ಳುತ್ತದೆ. ಅಗತ್ಯವೆನಿಸಿದರೆ ಕನ್ಸೀಲರ್ ಮೇಲೆ ಒದ್ದೆ ಸ್ಪಾಂಜ್‌ನಿಂದ ಮೃದುವಾಗಿ ಉಜ್ಜಬಹುದು. ಇದು ತಾತ್ಕಾಲಿಕ ಪರಿಹಾರ. ಶಾಶ್ವತ ಪರಿಹಾರಕ್ಕೆ ಲೇಸರ್ ಚಿಕಿತ್ಸೆ ಪಡೆಯಬಹುದು.

■ ಎಸ್.ತುಂಬೆ